ಶ್ರೀ ಕೆ. ಎಚ್. ರಂಗನಾಥ್.—ನನಗೆ ಬಂದಿರುವ ವರದಿ ಪ್ರಕಾರ ಇಂತಿ, ಸಿಂಧಗಿ ಮತ್ತು ಬಾಗೇಪಾಡಿ ತಾಲ್ಲೂಕುಗಳಲ್ಲಿ ಎಲ್ಲಾ ಗ್ರಾಮಗಳಿಗೂ ಕುಡಿಯುವ ನೀರನ್ನು ಪೂರೈಕೆ ವ್ಯವಸ್ಥೆ ಮಾಡಿದ್ದೇವೆ, ಮತ್ತು ಹ್ಯಾಂಡ್ ಪಂಪ್ಸನ್ನು ಒದಗಿಸಿಕೊಟ್ಟಿದ್ದೇವೆ ಎಂದು ಇದೆ. ಮಾನ್ಯ ಸದಸ್ಯರು ಈಗ ಕೇಳತಕ್ಕ ಪ್ರಶ್ನೆ ಬೇರೆ. ತೆದುದರಿಂದ ಇದರ ಬಗ್ಗೆ ಪ್ರತ್ಯೇಕವಾದ ಪ್ರಶ್ನೆಯನ್ನು ಹಾಕಿದರೆ ಬಹಳ ಮಟ್ಟಿಗೆ ಉತ್ತರ ದೊರೆಯಬಹುದು.

1-30 P. M.

ಶ್ರೀ ಜೆ. ಎಲ್. ಕಡಾಡಿ.—ಇದರ ಬಗ್ಗೆ ನಾನು ಮಾನ್ಯ ಆರೋಗ್ಯ ಸಚಿವರಿಗೂ, ಡೈರೆಕ್ಟರ್ ಆಫ್ ಹೆಲ್ತ್ ಸರ್ವೀಸಸ್ ಅವರಿಗೂ ಹಾಗೂ ಹೆಲ್ತ್ ಕಮಿಷನರ್ ಅವರಿಗೂ ನುಮಾರು ಒಂದು ತಿಂಗಳಿಂದಲೂ ಅಲ್ಲಿ ಆ ಔಷಧಿಗಳ ಕೊರತೆಯಿಂದ ಅನೇಕ ಜನರು ಸತ್ತಿದ್ದಾರೆ ಎಂಬ ವಿಷಯವನ್ನು ತಿಳಿದಿದ್ದೇನೆ. ನಾನು ನಿನ್ನೆ ತಾನೆ ಆ ಕ್ಷೇತ್ರದಿಂದ ಬಂದಿದ್ದೇನೆ ಅಲ್ಲಿ 15-20 ಜನರು ಸತ್ತಿರುವ ಕೇಸುಗಳ ಮಾಹಿತಿ ನನಗೆ ಬಂದಿದೆ. ಇದರ ಬಗ್ಗೆ ಸರ್ಕಾರದವರು ಯಾವ ಕ್ರಮ ಕೈಗೊಳ್ಳುತ್ತಾರೆಂದು ನಾನು ಬಹಳ ಚಿಂತನೆಯಿಂದ ಕೇಳುತ್ತಿದ್ದೇನೆ. ಆದರೆ ಈ ಸರ್ಕಾರದವರು ಅದರ ಬಗ್ಗೆ ಮಾಹಿತಿ ಇಲ್ಲವೆಂದು ಹೇಳಿದರೆ ಹೇಗೆ ? ಆದುದರಿಂದ ನಾನು ಕಳಕಳಿಯಿಂದ ತಮ್ಮನ್ನು ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ಪ್ರಶ್ನೆಯನ್ನು ತಡೆ ಹಿಡಿಯುವಂತೆ ಆಪ್ಪಣೆ ಕೊಡಬೇಕು.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಸದಸ್ಯರು ಕುಡಿಯುವ ನೀರಿನ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಈಗಾಗಲೇ ನಾನು ಉತ್ತರ ಹೇಳಿದ್ದೇನೆ. ಆದರೆ ಮಾನ್ಯ ಸದಸ್ಯರು ಈಗ ಏನು ಪ್ರಶ್ನೆ ಕೇಳುತ್ತಿದ್ದಾರೋ ಅದು ಆರೋಗ್ಯ ಇಲಾಖೆಗೆ ಸಂಬಂಧಪಟ್ಟಿದ್ದು, ಆದ್ದರಿಂದ ಮಾನ್ಯ ಸದಸ್ಯರು ಆದರ ಬಗ್ಗೆ ಬೇರೆ ಪ್ರಶ್ನೆಯನ್ನು ಕಳುಹಿಸಿದರೆ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಒದಗಿಸುತ್ತಾರೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಇಂದಿ ಹಾಗೂ ಸಿಂದಗಿ ತಾಲ್ಲೂಕಿನಲ್ಲಿ ಜನಗಳು ಸಾಯುತ್ತಿರುವುದನ್ನು ತಡೆಗಟ್ಟುವ ಬಗ್ಗೆ ಮಾನ್ಯ ಮಂತ್ರಿಗಳು ಜಿಲ್ಲಾಧಿಕಾರಿಯವರಿಗೆ ಡೈರೆಕ್ಷನ್ ಕೊಟ್ಟಿದೆ ಎಂದು ಹೇಳುತ್ತಿದ್ದಾರೆ. ಹಾಗಾದರೆ ಮಂತ್ರಿಗಳು ಡೈರೆಕ್ಷನ್ ಕೊಟ್ಟಮೇಲೆ ಎಷ್ಟು ಜನ ಸತ್ತಿದ್ದಾರೆ ಮತ್ತು ಡೈರೆಕ್ಷನ್ ಕೊಡುವುದಕ್ಕೆ ಮುಂಚೆ ಎಷ್ಟು ಜನ ಸತ್ತಿದ್ದಾರೆಂಬುದನ್ನು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಕೆ. ಎಚ್. ರಂಗನಾಥ್.—ಅದಕ್ಕೆ ನೋಟೀಸ್ ಬೇಕು.

Pay and Seniority of Panchayat Extension Officers

512. SRI T. TARE GOWDA (Kallambella).—Will the Minister for Rural Development and Panchayat Raj be pleased to state :—

(*a*) whether the Panchayat Extension Officers working in Development Blocks have been absorbed in the Revenue Department;

(*b*) if so, whether their seniorty has been restored in Revenue Department since the date of their entry into service;

(*c*) the reasons for transferring the Panchayat Extension Officers from Development Department to Revenue Department ;

(*d*) the reasons for not promoting Extension Officers as BDOs even after they have put in a total service of 15 to 20 years in Development Department ;

(*e*) the reasons why their pay scales have not been revised by the previous and the present Pay Commissions * comparable to the scale of their juniors working as Agri. Exten ion Officers in Blocks ?

* PEOs—Pay Scale Rs. 400-900

* AEOs—Pay Scale Rs. 660-1300

SRI K. H. RANGANATH (Minister for Co-operation) [On behalf of SRI K. PRABHAKAR (Minister for Rural Development and Panchayat Raj)] —

(*a*) Yes. Such of the Panchayat Extension Officers who had no parent Department of their own have been ordered to be absorbed in Revenue Department.

(*b*) Not yet. It is under consideration of Government.

(*c*) With a view to providing them a parent Department as such, and to secure them a permanent lien in service.

(*d*) Among the Extension Officers, some belong to Agricultural department, some to Animal Husbandry Department, some to Public Works Department, and some others to Co-operation Department. They have all promotional avenues open to them in their respective parent departments. The Panchayat Extension Officers as well as Social Education Organisers and Mukhyasevikas appointed as such had no parent Department of their own. The Panchayat Extension Officers have been absorbed in Revenue Department and the Social Education Organisers and Mukhyasevikas in the Department of Public Instruction. For these reasons, Government did not consider it necessary to promote them as Block Development Officers and did not make provision in the recruitment rules.

(*e*) The posts of Panchayat Extension Officers and Agricultural Extension Officers are two different distinct caders. One stands no comprison to the other, because of the different in the educational qualifications required for the two posts and also in the matter of duties and responsibilities.

ಶ್ರೀ ಟಿ. ತಾರೇಗೌಡ.—ಪಂಚಾಯ್ತಿ ವಿಸ್ತರಣಾಧಿಕಾರಿಗಳನ್ನು ರೆವೆನ್ಯೂ ಇಲಾಖೆಗೆ ಸೇರಿಸಿಕೊಳ್ಳಲು ಆದೇಶ ನೀಡಲಾಗಿದೆ ಎಂಬುದಾಗಿ ಉತ್ತರದಲ್ಲಿ ಹೇಳಿದೆ. ಆದರೆ 15-20 ವರ್ಷಗಳಿಂದ ಸರ್ವೀಸ್‌ನಲ್ಲಿದ್ದುಕೊಂಡು ಅವರು ಸರ್ವಿಸ್ಸಿಗೆ ಸೇರಿದಾಗಿನಿಂದ ಇದುವರೆಗೂ ಸೀನಿಯಾರಿಟಿ ಲಿಸ್ಟ್ ಬಗ್ಗೆ ಇಷ್ಟು ನಿದಾನ ಮಾಡಿರುವುದರಿಂದ ಅವರಿಗೆ ಮುಂಬಡ್ತಿಗೆ ಅವಕಾಶ ಇಲ್ಲದೇ ಇರುವಂತಾಗಿದೆ. ಆದ್ದರಿಂದ ಇದರಿಂದ ಅವರಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೇ ?

† ಶ್ರೀ ಕೆ. ಎಚ್. ರಂಗನಾಥ್.—ಏನು ಇಷ್ಟೆಯೋ ಅದನ್ನು ಸರ್ಕಾರ ತಿಳಿಸಿದೆ. ಅನ್ಯಾಯದ ಪ್ರಶ್ನೆ ಏನೂ ಇಲ್ಲ. It is a matter of inference.

ಶ್ರೀ ಟಿ. ತಾರೇಗೌಡ.—ಭೂ ಪಂಚಾಯ್ತಿ ವಿಸ್ತರಣಾಧಿಕಾರಿಗಳು, ಕೃಷಿಗಾರಿಕಾ ವಿಸ್ತರಣಾಧಿಕಾರಿಗಳು, ವ್ಯವಸಾಯ ವಿಸ್ತರಣಾಧಿಕಾರಿಗಳು ಇವರೆಲ್ಲರಿಗೂ ಮುಂಬಡ್ತಿಗೆ ಅವಕಾಶವಿದ್ದು, ಈ ಪಂಚಾಯ್ತಿ ವಿಸ್ತರಣಾಧಿಕಾರಿಗಳಿಗೆ ಮಾತ್ರ ಮುಂಬಡ್ತಿಗೆ ಅವಕಾಶ ಕಲ್ಪಿಸಿಕೊಟ್ಟಿಲ್ಲವೆಂದರೆ ಹೇಗೆ ?

ಶ್ರೀ ಕೆ. ಎಚ್. ರಂಗನಾಥ್.—ಸರ್ಕಾರ ಅದನ್ನು ಈಗ ವಿಚಾರ ಮಾಡುತ್ತಿದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಈ ವಿಸ್ತರಣಾಧಿಕಾರಿಗಳು, ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್ ಹಾಗೂ ಅನಿಮಲ್ ಹಸ್‌ಬೆಂಡರಿ ಡಿಪಾರ್ಟ್‌ಮೆಂಟಿನಿಂದ ಮತ್ತು ಇನ್ನೂ ಬೇರೆ ಬೇರೆ ಇಲಾಖೆಗಳಿಂದ ಬಂದಂ ವಿಲೇಜ್ ಪಂಚಾಯ್ತಿ ಅಧಿಕಾರಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಇವರಿಗೆ ಪರಿಪೂರ್ಣವಾಗಿ ಈ ವಿಚಾರ ಏನೂ ಗೊತ್ತಿಲ್ಲ. ಅಂತಹವರನ್ನು ಇಲ್ಲಿ ಡೆಪ್ಯುಟೇಷನ್ ಮಾಡಿ ಇಟ್ಟಿದ್ದೀರಿ. ಆದ್ದರಿಂದ ಇದರಲ್ಲಿ ನಿಜವಾಗಿ ಯಾರು ಯೋಗ್ಯರೋ, ಯಾರಿಗೆ ಹೆಚ್ಚು ಪರಿಶ್ರಮ ಇದರಲ್ಲಿದೆಯೋ ಅಂತಹವರನ್ನಾದರೂ ಅಲ್ಲಿಯೇ ಇಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್.—ಆ ಪ್ರಶ್ನೆ ಈಗ ಉದ್ಭವಿಸುವುದಿಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ.—ವ್ಯವಸಾಯ ಇಲಾಖೆ, ಪಶುಸಂಗೋಪನಾ ಇಲಾಖೆಗಳಿಂದ ಬಂದಿರತಕ್ಕ ಪಂಚಾಯ್ತಿ ವಿಸ್ತರಣಾಧಿಕಾರಿಗಳಲ್ಲಿ ಬಹುಭಾಗದ ಜನರಿಗೆ ಡೆವಲಪ್‌ಮೆಂಟ್ ವರ್ಕ್ಸ್ ವಿಷಯ ಗೊತ್ತಿಲ್ಲ. ಇವರಿಗೆ ವಿಲೇಜ್ ಪಂಚಾಯ್ತಿ ಎಲೆಕ್ಷನ್ ವಿಷಯವಾಗಲೀ ಹಾಗೂ ವೀಟೀಂಗಿಗೆ ಅಟೆಂಡ್ ಮಾಡುವುದಾಗಲೀ ಗೊತ್ತಿಲ್ಲ. ಆದರಿಂದಾಗಿ ಈಗಿನ ನಮ್ಮ ಪಂಚಾಯ್ತಿ ವಿಸ್ತರಣಾಧಿಕಾರಿಗಳಿಂದ ಅಲ್ಲಿ ಯಾವ ಕೆಲಸವೂ ಸಫಲತೆಯಾಗುವುದಿಲ್ಲ. ಆದಕಾರಣ ಅಂತಹವರು ಅಲ್ಲಿ ಸರಿಯಾದ ರೀತಿಯಲ್ಲಿ ಕೆಲಸ ಮಾಡದಿದ್ದರೆ, ಅವರನ್ನು ಮತ್ತೆ ಬೇರೆ ಕಡೆಗೆ ಎಲ್ಲಾದರೂ ವರ್ಗ ಮಾಡುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್.—ಅಲ್ಲಿರುವ ಎಲ್ಲಾ ಅಧಿಕಾರಿಗಳಿಗೂ ಏನೂ ಬರುವುದಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದರೆ ಅದನ್ನು ಸರ್ಕಾರ ಒಪ್ಪುವುದಿಲ್ಲ. ಆ ಪ್ರಶ್ನೆ ಈಗ ಉದ್ಭವಿಸುವುದಿಲ್ಲ.

ಶ್ರೀ ಟಿ. ತಾರೇಗೌಡ.—ಅಲ್ಲಿ ಅನೇಕ ವಿಸ್ತರಣಾಧಿಕಾರಿಗಳು ನಮ್ಮಲ್ಲಿ 15-20 ವರ್ಷಗಳಿಂದಲೂ ಸರ್ವಿಸ್‌ನಲ್ಲಿದ್ದರೂ ಅವರಿಗೆ ಮುಂಬಡ್ತಿಗೆ ಅವಕಾಶವಿಲ್ಲದೆ ಈವರಿಗೂ ಬಿ. ಡಿ ಒ. ಗಳಾಗಿಯೇ ಇದ್ದಾರೆ. ಆದ್ದರಿಂದ ಈಗಲಾದರೂ ಅವರಿಗೆ ಆಗಿರತಕ್ಕಂಥ ಅನ್ಯಾಯವನ್ನು ಕೂಡಲೇ ತಪ್ಪಿಸುವುದಕ್ಕೆ ಸರ್ಕಾರ ಸಹಾಯ ಮಾಡುತ್ತದೆಯೇ ?

SRI K. H. RANGANATH.—I have already assured the Hon'ble Members. Government will examine that aspect.

MADAM SPEAKER.—Questions are Over,

QUESTIONS FOR ANSWERS ON THE DAY
(but not taken up)

Construction of K. E. B Residental Houses in Kaiwara

370. SRI CHOWDA REDDY (Chintamani).—Will the Minister of State for Information and Power be pleased to state :—

(*a*) the estimated cost of residential houses being constructed by K. E. B. (Departmental) in Kaiwara Hobli of Chintamani Taluk ;